ಕರ್ನಾಟಕ ನಾಗರೀಕ ಸೇವಾ (ಗ್ರೂಪ್ –ಸಿ ಮತ್ತು ಗ್ರೂಪ್ – ಡ ಗುತ್ತಿಗೆ ಆಧಾರದ ನೌಕರರ ಸೇವೆಯನ್ನು ಸರ್ಕಾರದ ಸಚಿವಾಲಯದಲ್ಲಿ ವಲೀನಗೊಳಿಸುವ) (ವಿಶೇಷ) ನಿಯಮಗಳು, 2005 ರ ಕರಡಿಗೆ 534 ಆಕ್ಷೇಪಣೆಗಳು ಈ) ಸ್ವೀಕೃತವಾಗಿದ್ದವು. ಈ ಆಕ್ಷೇಪಣೆಗಳನ್ನು ಪರಶೀಲಿಸಿ, ಕರಡು ನಿಯಮಗಳನ್ನು ಅಂತಿಮಗೊಳಿಸಲಾಗಿದೆ. ಈ ನಿಯಮದಲ್ಲಿ ಗುತ್ತಿಗೆ ಆಧಾರದ ಮೇಲೆ 10 ವರ್ಷ ಸೇವೆ ಸಲ್ಲಿಸಿದವರು ಅಥವಾ ದಿನಾಂಕ 01–06–2004 ಕ್ಕಿಂತ ಮೊದಲು 10 ವರ್ಷಗಳ ಅವಧಿಯಲ್ಲಿ ಕನಿಷ್ಟ 2400 ದಿನಗಳ ಸೇವೆ ಸಲ್ಲಿಸಿದವರು ಮತ್ತು ದಿನಾಂಕ 27–02–2002 ರಂದು ಸೇವಯಲ್ಲಿದ್ದವರನ್ನು ಮಾತ್ರ ಸಕ್ರಮಗೊಳಿಸಲು ಅವಕಾಶ ಕಲ್ಪಿಸಲಾಗಿದೆ. ಈ ಷರತ್ತುಗಳನ್ನು ಪೂರೈಸಿದವರನ್ನು ಮಾತ್ರ ಸಕ್ರಮಾತಿಗೆ ಪರಿಗಣಿಸಲಾಗಿದೆ.

ಇಲ್ಲ

ಉದ್ಭವಿಸುವುದಿಲ್ಲ.

5705. (6365) ಶ್ರೀ ಕೆ. ಜಿ. ಬೋಪಯ್ಯ (ಮಡಿಕೇರಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಮಡಿಕೇರಿ ನಗರಸಭೆಯಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ: (ವಿವರಗಳನ್ನು ನೀಡುವುದು):

ಆ) ಈ ಹುದ್ದೆಗಳನ್ನು ಇದುವರೆಗೂ ಭರ್ತಿ ಮಾಡದಿರಲು ಕಾರಣಗಳೇನು:

ಇ) ಹುದ್ದೆಗಳ ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು:

ಶ್ರೀ ಧರ್ಮಸಿಂಗ್, ಮಾನ್ಯ ಮುಖ್ಯ ಮಂತ್ರಿಗಳು

ಅ) 57 ಹುದ್ದೆಗಳು ಖಾಲಿ ಇವೆ.

ಪೌರ ಕಾರ್ಮಿಕರು	14
ಲೋಡರ್ಸ್	16
ಕಿರಿಯ ಅಭಿಯಂತರರು	03
ಆರೋಗ್ಯ ಪರಿವೀಕ್ಷಕರು	03
ಸಹಾಯಕ ಪಂಪ್ ಆಪರೇಟರ್	06
ಇತರೆ	15

ಆ) ಈಗಾಗಲೇ ಅಕೌಂಟೆಂಟ್, ಕಿರಿಯ ಅಭಿಯಂತರರು (ಸಿವಿಲ್ ಹಾಗೂ ಎಲೆಕ್ಟ್ರಿಕಲ್) ಮತ್ತು ಪರಿಸರ ಅಭಿಯಂತರರ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗ ಮುಖಾಂತರ ಆಯ್ಕೆ ಪಟ್ಟಿಯನ್ನು ಪಡೆಯಲಾಗಿದ್ದು, ಸದರಿ ಅಭ್ಯರ್ಥಿಗಳ ನೇಮಕಾತಿ ಮಾಡುವುದು ಪ್ರಕ್ರಿಯೆಯಲ್ಲಿರುತ್ತದೆ. ಅಲ್ಲದೆ ಆರೋಗ್ಯ ಪರಿವೀಕ್ಷಕರ ಹಾಗೂ ಇನ್ನುಳಿದ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

5706. (6595) ಶ್ರೀ ದೊಡ್ಡನಗೌಡ ಗುಂಡನಗೌಡ ಪಾಟೀಲ್ (ಹುನಗುಂದ) : ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು, ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಕೃಷ್ಣಾ ಮೇಲ್ದಂಡೆ ಯೋಜನೆಯ ಆಲಮಟ್ಟಿ ಮತ್ತು ನಾರಾಯಣಪುರ ಆಣೆಕಟ್ಟಿನ ಹಿನ್ನೀರಿನಿಂದ ಬಾಧಿತವಾಗಿರುವ ಗ್ರಾಮಗಳಲ್ಲಿ ನೀರು ಶೇಖರಣೆಯಿಂದಾಗಿ ರೈತರ ಜಮೀನಿನ ಪೈರು (ಬೆಳೆ)ಗಳಿಗೆ ಮನೆ ಮತ್ತು ಜಾನುವಾರುಗಳಿಗೆ ತೊಂದರೆಯಾಗುತ್ತಿರುವುದು ನಿಜವಲ್ಲವೇ:

ಆ) ಹಾಗಿದ್ದಲ್ಲಿ ಈ ಹಿನ್ನೀರಿನಿಂದ ಈ ಮುಂಗಾರು ಬೆಳೆಗಳಿಗೆ ಮತ್ತು ಜಾನುವಾರುಗಳಿಗೆ ತೊಂದರೆಯಾದರೆ ಪರಿಹಾರ ನೀಡುವಲ್ಲಿ ಸರ್ಕಾರದ ನಿಲುವೇನು;

ಇ) ಈ ಬಗ್ಗೆ ಸಮೀಕ್ಷೆ ನಡೆಸಿ ಪರಿಹಾರ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ:

ಶ್ರೀ ಮಲ್ಲಿಕಾರ್ಜುನ ಖರ್ಗೆ, ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು.

ಅ) ಕೃಷ್ಣಾ ಮೇಲ್ದಂಡೆ ಯೋಜನೆಯ ಆಲಮಟ್ಟಿ ಮತ್ತು ನಾರಾಯಣಪುರ ಆಣೆಕಟ್ಟುಗಳ ಮುಳುಗಡೆಯಲ್ಲಿ ಬರುವ ಭೂಮಿಯನ್ನು ಜಲಾಶಯದ ಗರಿಷ್ಟ ಮಟ್ಟದವರೆಗೆ (ಎಫ್. ಆರ್. ಎಲ್) ಸ್ವಾಧೀನ ಪಡಿಸಿಕೊಳ್ಳಲಾಗಿದ್ದು, ಈಗಾಗಲೇ ಪರಿಹಾರ ಧನವನ್ನು ಸಹ ನೀಡಲಾಗಿರುತ್ತದೆ. ಆದಾಗ್ಯೂ, ಜಲಾಶಯಗಳ ಹಿನ್ನೀರಿನಿಂದ ಕೆಲವು ಗ್ರಾಮಗಳು ಬಾಧಿತವಾಗಿರುವ ಬಗ್ಗೆ ದೂರು ವರದಿಗಳು ಬಂದಿದ್ದು, ಅಗತ್ಯ ಸರ್ವೇಕ್ಷಣಾ ಕಾರ್ಯ ಕೈಗೆತ್ತಿಕೊಳ್ಳಲು ಅನುಮೋದನೆ ನೀಡಲಾಗಿದೆ. ಸರ್ವೇಕ್ಷಣಾ ವರದಿಯಾನುಸಾರ ಮುಂದಿನ ಅಗತ್ಯ ಕ್ರಮ ಜರುಗಿಸಲಾಗುವುದು.

ಆ) ಕೃಷ್ಣಾ ಮೇಲ್ದಂಡೆ ಯೋಜನೆಯ ಆಲಮಟ್ಟಿ ಮತ್ತು ನಾರಾಯಣಪುರ ಆಣೆಕಟ್ಟುಗಳ ಮುಳುಗಡೆಯಲ್ಲಿ ಬರುವ ಭೂಮಿಯನ್ನು ಜಲಾಶಯದ ಗರಿಷ್ಟ ಮಟ್ಟದವರೆಗೆ (ಎಫ್. ಆರ್. ಎಲ್) ಸ್ವಾಧೀನ ಪಡಿಸಿಕೊಳ್ಳಲಾಗಿದ್ದು, ಈಗಾಗಲೇ ಪರಿಹಾರ ಧನವನ್ನು ಸಹ ನೀಡಲಾಗಿರುತ್ತದೆ. ಆದಾಗ್ಯೂ, ಜಲಾಶಯಗಳ ಹಿನ್ನೀರಿನಿಂದ ಕೆಲವು ಗ್ರಾಮಗಳು ಬಾಧಿತವಾಗಿರುವ ಬಗ್ಗೆ ದೂರು ವರದಿಗಳು ಬಂದಿದ್ದು, ಅಗತ್ಯ ಸರ್ವೇಕ್ಷಣಾ ಕಾರ್ಯ ಕೈಗೆತ್ತಿಕೊಳ್ಳಲು ಅನುಮೋದನೆ ನೀಡಲಾಗಿದೆ. ಸರ್ವೇಕ್ಷಣಾ ವರದಿಯಾನುಸಾರ ಮುಂದಿನ ಅಗತ್ಯ ಕ್ರಮ ಜರುಗಿಸಲಾಗುವುದು.

5709. (6598) ಶ್ರೀ ದೊಡ್ಡನಗೌಡ ಗುಂಡನಗೌಡ ಪಾಟೀಲ್ (ಹುನಗುಂದ) : ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು, ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಐ.ಡಿ.ಎಸ್.ಎಂ.ಟಿ. ಯೋಜನೆಯನ್ನು ರಾಜ್ಯದಲ್ಲಿ ಯಾವ ವರ್ಷದಿಂದ ಜಾರಿಗೊಳಿಸಲಾಗಿದೆ; ಅಂದಿನಿಂದ ಇಂದಿನವರೆಗೂ ಯೋಜನೆಗೆ ಒಳಪಟ್ಟ ಸ್ಥಳಗಳಾವುವು: (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಈ ಯೋಜನೆಗೆ ಒಳಪಡಲು ನಗರ ಸ್ಥಳೀಯ ಸಂಸ್ಥೆಗಳು ಪಾಲಿಸಬೇಕಾದ ಅಗತ್ಯ ಕ್ರಮಗಳಾವುವು: (ಕೇಂದ್ರ ಸರ್ಕಾರದ ಮಾರ್ಗದರ್ಶಕ ಸೂತ್ರಗಳ ಪಟ್ಟಿ ಇದ್ದರೆ ಒದಗಿಸುವುದು);

ಇ) ಬಾಗಲಕೋಟೆ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳ ಯಾವ ಯಾವ ನಗರ ಸ್ಥಳೀಯ ಸಂಸ್ಥೆಗಳು ಇಂದಿಗೂ ಈ ಯೋಜನೆ ಅಡಿಯಲ್ಲಿ ಒಳಪಡಿಸಲಾಗಿಲ್ಲ ಕಾರಣಗಳೇನು;

ಈ) ಈ ಯೋಜನೆಗೆ ಒಳಪಡಿಸುವಾಗ ಈ ಮೂರು ಜಿಲ್ಲೆಗಳ ನಗರ ಸ್ಥಳೀಯ ಸಂಸ್ಥೆಗಳ ಬಗ್ಗೆ ತಾರತಮ್ಯ ತೋರಲಾಗುತ್ತಿರುವುದು ನಿಜವಲ್ಲವೇ; ಹಾಗಿದ್ದಲ್ಲಿ, ಸರ್ಕಾರದ ಕ್ರಮವೇನು;

ಶ್ರೀ ಎಸ್. ಆರ್. ಮೋರೆ, ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು.

ಅ) ಐ.ಡಿ.ಎಸ್.ಎಂ.ಟಿ. ಯೋಜನೆಯನ್ನು ರಾಜ್ಯದಲ್ಲಿ 1982–83 ನೇ ಸಾಲಿನಿಂದ ಜಾರಿಗೊಳಿಸಲಾಗಿದೆ. ಇದುವರೆವಿಗೂ ಒಟ್ಟು 177 ಪಟ್ಟಣಗಳನ್ನು ಆಯ್ಕೆ ಮಾಡಲಾಗಿದೆ. (ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ).

ಆ) 5 ಲಕ್ಷದೊಳಗಿನ ಜನಸಂಖ್ಯೆಯಿರುವ ಪಟ್ಟಣಗಳನ್ನು ಐ.ಡಿ.ಎಸ್.ಎಂ.ಟಿ ಯೋಜನೆಯಡಿ ಆಯ್ಕೆ ಮಾಡಲಾಗುತ್ತಿದ್ದು, ಸದರಿ ಪಟ್ಟಣಗಳನ್ನು ಆಯ್ಕೆ ಮಾಡುವಾಗ ಕರ್ನಾಟಕ ಅರ್ಬನ್ ಸ್ಕಾಟಜಿ ಪೇಪರ್‌ನಲ್ಲಿ ಅಳವಡಿಸಿರುವ ಪಟ್ಟಣಗಳಿಗೆ ಮೊದಲ ಆದ್ಯತೆ ನೀಡಲಾಗುವುದು. ಕೇಂದ್ರ ಸರ್ಕಾರದ